ಒ.ಎಸ್. ನಂ.75/2013
ಪಿಡಬ್ಲು-1

ದಿನಾಂಕ 21.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

ನಾನು 7ನೆ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುತ್ತೇನೆ. ಉಪ ನೊಂದಣಾಧಿಕಾರಿ ಕಚೇರಿ ಯಾವ ರೀತಿ ನೊಂದಣಿ ವ್ಯವಹಾರಗಳಾಗುತ್ತವೆ ಎಂದು ನನಗೆ ಗೊತ್ತಿಲ್ಲ. ಈ ದಿನ ನನ್ನೊಂದಿಗೆ 2ನೆ ವಾದಿ ಬಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿಯಲ್ಲಿ ಸಿರಸಮ್ಮ ರವರು ಈ ದಾವೆಯಲ್ಲಿ ಬರೆದ ವಿಚಾರಗಳು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸಹೋದರ - ಸಹೋದರಿಯರ ನಡುವೆ ಪಾಲು ಆಗಬೇಕೆಂದು ಸರ್ವೆ ಮಾಡಬೇಕಾಗುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಾಯಿ ಬರೆದುಕೊಟ್ಟಿರುವ ಹಕ್ಕು ಬಿಡುಗಡೆ ಪತ್ರ ಮಾಡುವ ಮೊದಲು ಸರ್ವೆ ಮಾಡಿಸಿಲ್ಲ ಎಂದರೆ ಸರಿ. ನನ್ನ ತಾಯಿ, 2ನೆ ವಾದಿ ಮತ್ತು 1ನೆ ಪ್ರತಿವಾದಿ ಬರೆದುಕೊಟ್ಟ ಹಕ್ಕು ಬಿಡುಗಡೆ ಪತ್ರದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ, 2ನೆ ವಾದಿ ಮತ್ತು 1ನೆ ಪ್ರತಿವಾದಿ ರೂ.1,00,000/- ಹಣ ಮತ್ತು ಎರಡು ತೊಲೆ ಬಂಗಾರ ತೆಗೆದುಕೊಂಡು ಹಕ್ಕು ಬಿಡುಗಡೆ ಪತ್ರ ಮಾಡಿರುತ್ತಾರೆ ಎಂದರೆ ಸರಿ. ಪಾಲು ಪತ್ರ ಮಾಡಿಕೊಡತ್ತೇನೆಂದು ಹೇಳಿ ನಮಗೆ ಮೋಸ ಮಾಡಿ ಹಕ್ಕು ಬಿಡುಗಡೆ ಪತ್ರ ಮಾಡಿಕೊಂಡಿದ್ದಾರೆಂದು ನಾನು ಯಾವುದೆ ದೂರು ನೀಡಿಲ್ಲ ಎಂದರೆ ಸರಿ. ಪ್ರತಿವಾದಿಯರು ಕೇಸನ್ನು ಹಿಂದೆ ತೆಗೆದುಕೊಳ್ಳುವಂತೆ ಬೆದರಿಕೆ ಹಾಕಿದ ಬಗ್ಗೆ ನಾನು ನೆಲೋಗಿ ಠಾಣೆಯಲ್ಲಿ ದೂರು ನೀಡಿರುತ್ತೇನೆ. ನನ್ನ ತಾಯಿಗೆ ಮೋಸ ಮಾಡಿ ಹಕ್ಕು ಪತ್ರ ಮಾಡಿಕೊಂಡ ಬಗ್ಗೆ ಪೋಲಿಸ ಠಾಣೆಯಲ್ಲಿ ದೂರು ನೀಡಲು ತೊಂದರೆ ಇತ್ತಾ ಎಂದರೆ ಪ್ರತಿವಾದಿಯರು ನನಗೆ ಹೆದರಿಸಿದ್ದರಿಂದ ನಾನು ದೂರು ನೀಡಿಲ್ಲ ಎಂದು ನುಡಿಯುತ್ತಾರೆ. 2ನೆ ಪ್ರತಿವಾದಿಗೆ ಬರೆದುಕೊಟ್ಟ ಹಕ್ಕು ಬಿಡುಗಡೆ ಪತ್ರದ ಬಗ್ಗೆ ನನಗಿಂತ ನನ್ನ ತಂಗಿಯಾದ ಈಶ್ವರಮ್ಮಳಿಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸರಿ. ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟ ಬಗ್ಗೆ ನನಗೆ 03-ವರ್ಷಗಳ ನಂತರ ನನ್ನ ತಾಯಿ ಹೇಳಿದ ಮೇಲೆ ನನಗೆ ಗೊತ್ತಾಗಿರುತ್ತದೆ. ಸಾಮಾನ್ಯವಾಗಿ ಪಾಲು ಪತ್ರವಾದ 15-ದಿನಗಳ ನಂತರ ಅವರ ಹೆಸರಿನಲ್ಲಿ ಪಹಣಿ ಬರುತ್ತವೆ ಎಂದರೆ ಸರಿ. ಹಕ್ಕು ಬಿಡುಗಡೆ ಪತ್ರವಾದ ನಂತರ ನನ್ನ ತಾಯಿಯ ಹೆಸರಿನಲ್ಲಿ ಪಹಣಿಗಳು ಆಗಿರುತ್ತವೊ ಇಲ್ಲವೆಂದು ನೋಡಿರುತ್ತೀರಾ ಎಂದರೆ ಸಾಕ್ಷಿ ನಾನು ವಿಚಾರಣೆ ಮಾಡಿಲ್ಲ ಎಂದು

ಹೇಳುತ್ತಾರೆ. ನನ್ನ ತಾಯಿ, 2ವಾದಿ ಮತ್ತು 1ನೆ ಪ್ರತಿವಾದಿ ಸೇರಿ 2ನೆ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರವನ್ನು ಮಾಡಿಕೊಟ್ಟಿದ್ದರೂ ಸಹ ಖೊಟ್ಟಿ ರೀತಿಯಿಂದ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಾಯಿಯ ತಂದೆಯ ಹೆಸರು ಗುರಪ್ಪ ಎಂದರೆ ಸರಿ. ಗುರಪ್ಪರವರಿಗೆ 04 ಜನ ಮಕ್ಕಳು ಎಂದರೆ ಸಾಕ್ಷಿ 03 ಜನ ಮಕ್ಕಳು ಎಂದು ಹೇಳುತ್ತಾರೆ. 2ನೆ ಪ್ರತಿವಾದಿ ಗುರಪ್ಪರವರ ಮಗ ಎಂದರೆ ಸರಿಯಲ್ಲ. ಸಾಕ್ಷಿ ವೀರಭದ್ರಪ್ಪರವರ ಮಗ ಎಂದು ಹೇಳುತ್ತಾರೆ. 2ನೆ ಪ್ರತಿವಾದಿ ವೀರಭದ್ರಪ್ಪನ ಮಗನೆಂದು ನಾನು ದಾಖಲೆಗಳನ್ನು ಹಾಕಬಹುದಾ ಎಂದರೆ ಸಾಕ್ಷಿ ದಾಖಲೆ ಹಾಕಿರುತ್ತೇನೆ ಎಂದು ಹೇಳುತ್ತೇನೆ ಎಂದು ಹೇಳುತ್ತಾರೆ. ನಿಪಿ-43 ರಲ್ಲಿ ಮಾನಪ್ಪ ತಂದೆ ವೀರಭದ್ರಪ್ಪ ಎಂಬ ಹೆಸರು ಇದ್ದು ಅದರಲ್ಲಿ ಅಡ್ಡ ಹೆಸರು ಇಲ್ಲ ಎಂದರೆ ಸರಿ. ನಿಪಿ-43 2ನೆ ಪ್ರತಿವಾದಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸಾಕ್ಷಿ ಉತ್ತರ ನೀಡದೆ ಮೌನವಾಗಿರುತ್ತಾರೆ. ರವಿ ತಂದೆ ಮಹಾದೇವಪ್ಪ ದುದನಿ ಎಂದರೆ ನಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಊರು ದುದನಿ ಇದ್ದು ನನ್ನ ಅಡ್ಡ ಹೆಸರು ಸೋನಾರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಹಕ್ಕು ಬಿಡುಗಡೆ ಪತ್ರದಲ್ಲಿ ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ದಿನ ನಾನು ಬಂದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಾಯಿ 2ನೆ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟರೂ ಸಹ 2ನೆ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ